**ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ರವರು ಯಡಿವಾಳ ಮರಳು ಬ್ಲಾಕ್ (Block No: 01) ರಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಾಭದ್ರಾ ನದಿ ತೀರದ ಸರ್ವೆ.ನಂ-66 & 65/2, ಯಡಿವಾಳ ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆಯಲ್ಲಿ 40-00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 1,67,890 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯ ಪ್ರಸ್ಥಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಈ ಪ್ರಯುಕ್ತ ಉದ್ದೇಶಿತ ಯೋಜನೆಯ ಕುರಿತು ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.**

RECEIVED
26 JUL 2022
KSPCB, Bangalore

ದಿನಾಂಕ: 31.05.2022.

ಸಮಯ: ಬೆಳಿಗ್ಗೆ 10.00 ಘಂಟೆ.

ಸ್ಥಳ: ಚಿಕಲಪರ್ವಿ (ಶ್ರೀ ಗುರು ವಿರುಪಾಕ್ಷೇಶ್ವರ ಕಲ್ಯಾಣ ಮಂಟಪದ ಹತ್ತಿರ)

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ರವರು ಯಡಿವಾಳ ಮರಳು ಬ್ಲಾಕ್ (Block No: 01) ರಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಾಭದ್ರಾ ನದಿ ತೀರದ ಸರ್ವೆ.ನಂ-66 & 65/2, ಯಡಿವಾಳ ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆಯಲ್ಲಿ 40-00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 1,67,890 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯ ಪ್ರಸ್ಥಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಈ ಕುರಿತು ದಿನಾಂಕ: 31.05.2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಶ್ರೀ ಗುರು ವಿರುಪಾಕ್ಷೇಶ್ವರ ಕಲ್ಯಾಣ ಮಂಟಪದ ಹತ್ತಿರ, ಚಿಕಲಪರ್ವಿ ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ-1 |
| ಮೆಃ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | ಅನುಬಂಧ-5 |

ಕೇಂದ್ರ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ : 14.09.2006 (ತಿದ್ದುಪಡಿ ದಿನಾಂಕ : 01.12.2009) ರಂದು ಹೊರಡಿಸಿದ ಅಧಿಸೂಚನೆಯ ಪ್ರಕಾರ ಮೇಲಿನ ಉದ್ದೇಶಿತ ಯೋಜನೆಗೆ ಪರಿಸರ ವಿಮೋಚನಾ ಪತ್ರವನ್ನು ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಬೆಂಗಳೂರು ಇವರಿಂದ ಈ ಅಧಿಸೂಚನೆಯ ಪ್ರಕಾರ, ಪರಿಸರ ಸಾರ್ವಜನಿಕ ಆಲುಕೆ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ. ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರು ಮೇಲಿನ ಯೋಜನೆಗೆ Terms Of Reference ಅನ್ನು ದಿನಾಂಕ: 13.10.2021 ರಂದು ಅಂತಿಮಗೊಳಿಸಿ ನೀಡಿದ್ದು, ಅದರಂತೆ ಕರ್ನಾಟಕ

636
22/07/22

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರುವಂತೆ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಹಟ್ಟಿ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರಿಗೆ ತಿಳಿಸಿರುತ್ತಾರೆ. ಸದರಿ ಕಂಪನಿಯವರು ತಮ್ಮ ಪತ್ರ ದಿನಾಂಕ: 07.01.2022 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರಿರುತ್ತಾರೆ. ಈ ಕೋರಿಕೆ ಮೇರೆಗೆ, ಮಾನ್ಯ ಜಿಲ್ಲಾಧಿಕಾರಿಗಳ ಒಪ್ಪಿಗೆ ಮತ್ತು ದಿನಾಂಕ ನಿಗದಿಪಡಿಸಲಾಯಿತು.

ಮೇಲಿನ ಅಧಿಸೂಚನೆ ಅನ್ವಯ ಯೋಜನೆದಾರರು ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಸಮಯ ನೀಡಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ **"ಕನ್ನಡ ಪ್ರಭಾ"** (ಕನ್ನಡ), **" ದಿ ಟೈಮ್ಸ್ ಆಫ್ ಇಂಡಿಯಾ"** (ಆಂಗ್ಲ) ಭಾಷೆಯಲ್ಲಿ ದಿನಾಂಕ: **30.04.2022** ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ **"ಸುದ್ದಿಮೂಲ"** ದಿನ ಪತ್ರಕೆಯಲ್ಲಿ ದಿನಾಂಕ: **28.04.2022** ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಮುಂದುವರೆದು, ಯೋಜನಾ ಸ್ಥಳದಲ್ಲಿ ವಾಸವಾಗಿರುವ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ಬಾದಿತರಾಗುವ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರಿಗೆ ಸಲ್ಲಿಸುವಂತೆ ಸದರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಮೇಲಿನ ಪ್ರಕಟಣೆಯಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮೇಲೆ ನಿಗದಿಪಡಿಸಿದ ಸ್ಥಳದಲ್ಲಿ ದಿನಾಂಕ: 31.05.2022 ರಂದು ಬೆಳಿಗ್ಗೆ 10.00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಆರಂಭದಲ್ಲಿ, ಶ್ರೀ. ರಾಘವ, ಮ್ಯಾನೇಜರ್, ಮೆಃ ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿ, ಇವರು ಶ್ರೀ. ದುರಗೇಶ್, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಮತ್ತು ಎಂ. ಎಸ್. ನಟೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ರಾಯಚೂರು ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ ಸರ್ಕಾರಿ ಅಧಿಕಾರಿಗಳು ಮತ್ತು ಸಭೆಯಲ್ಲಿ ಉಪಸ್ಥಿತರಿಂದ ಮದ್ಲಾಪುರ, ಯಡಿವಾಳ ಗ್ರಾಮಸ್ಥರಿಗೆ, ಸಾರ್ವಜನಿಕರಿಗೆ ಮತ್ತು ಮಾಧ್ಯಮದವರಿಗೆ ಸ್ವಾಗತವನ್ನು ಕೋರಿದರು.

ಶ್ರೀ. ರಾಘವ, ಮ್ಯಾನೇಜರ್, ಮೆಃ ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿಯವರು, ಮಾತಾನಾಡಿ ಹಿಂದೆ ಇದ್ದ ಮರಳು ಗಣಿಗಾರಿಕೆಯ ನ್ಯೂನತೆಗಳನ್ನು ಸರಿಪಡಿಸಿ ಸ್ಥಳೀಯ ಸಾರ್ವಜನಿಕರಿಗೆ ಸುಲಭವಾಗಿ ಮರಳನ್ನು ಒದಗಿಸಲು ಅನುಕೂಲವಾಗುವಂತೆ ಕರ್ನಾಟಕ ಸರ್ಕಾರವು ನೂತನ ಮರಳು ನೀತಿ 2020 ಜಾರಿಗೆ ತಂದಿರುವ ಬಗ್ಗೆ ತಿಳಿಸಿದರು ಮತ್ತು ಈ ಹೊಸ ಮರಳು ನೀತಿ ಪ್ರಕಾರ, ರಾಜ್ಯದ ನದಿ ಪಾತ್ರದ ಗಣಿಗಾರಿಕೆಯನ್ನು ಸರ್ಕಾರಿ ಕಂಪನಿಗಳಿಂದ ನಡೆಸಲು ಉದ್ದೇಶಿಸಿದ್ದು ಈ ಪ್ರಕಾರ ಯಡಿವಾಳ ಮತ್ತು ಮದ್ಲಾಪುರ ಬ್ಲಾಕ್‌ಗಳನ್ನು ಮೆಃ ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿಯವರಿಗೆ ವಹಿಸಿದೆ. ಉತ್ತರ

ಕರ್ನಾಟಕದಲ್ಲಿ ಮರಳು ಗಣಿಗಾರಿಕೆಯನ್ನು ಮೆಃ ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿಯವರು ಮಾಡಬೇಕೆಂದು ಸರ್ಕಾರ ನಿಗದಿಪಡಿಸಿದೆ ಹಾಗೂ ಇದನ್ನು ನೂತನ ಮರಳು ಗಣಿಗಾರಿಕೆಯ ಪ್ರಕಾರ ಮಾಡಬೇಕು ಎಂದು ತಿಳಿಸಿದ್ದು, ಈ ಪ್ರಕಾರ ಮೆಃ ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿಯವರು ಮೇಲಿನ ಯೋಜನೆ ಕೈಗೆತ್ತಿಗೊಂಡಿದೆ.

ಮೇಲಿನ ಯೋಜನೆಯ ಪ್ರತಿನಿಧಿಗಳು ಹಾಗೂ ಯೋಜನೆಯ ಪರಿಸರ ಸಲಹೆಗಾರರಾದ ಮೆಃ ಹೊರೈಜಾನ್ ವೆಂಚುರ್ಸ್‌ನ ರವರು ಕಾರ್ಯಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

ಮೇಲಿನ ಯೋಜನೆ ವಿವರಗಳನ್ನು ಮಂಡಿಸಿದ ಮೇರೆಗೆ, ಸಾರ್ವಜನಿಕರು ಈ ಕೆಳಕಂಡ ವ್ಯಕ್ತ ಪಡಿಸಿದ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದು, ಅನಿಸಿಕೆಗಳು ಕೆಳಗಿನಂತಿವೆ.

1. **ಶ್ರೀ. ಭಾಷಾ, ಚಿಕಲಪರ್ವಿ ಗ್ರಾಮ :-**

   ಸ್ಥಳೀಯ ಗ್ರಾಮಗಳಲ್ಲಿ ಉದ್ಯೋಗ ಕೊರತೆ ಇರುವುದರಿಂದ, ಸ್ಥಳೀಯರಿಗೆ ಉದ್ಯೋಗ ಅವಕಾಶ ಕಲ್ಪಿಸಲು ಅನುಕೂಲವಾಗುವಂತೆ ಜನಗಳಿಂದಲೇ ಗಣಿಗಾರಿಗೆ ಮಾಡಿಸಬೇಕು ಮತ್ತು ಯಾವುದೇ ಕಾರಣದಿಂದ ಯಾಂತ್ರಿಕ ಗಣಿಗಾರಿಕೆ ನಡೆಸಬಾರದು. ಮುಂದುವರೆದು, ಇದರಿಂದ ಪರಿಸರದ ಮೇಲೆ ದುಷ್ಪರಿಣಾಮಗಳು ಇರುವುದಿಲ್ಲ ಎಂದು ಅಹವಾಲು ತಿಳಿಸಿದರು. ಶ್ರೀ ಭಾಷಾರವರು, ಈ ಗಣಿಗಾರಿಯಿಂದ ಸ್ಥಳೀಯರಿಗೆ ಎಷ್ಟು ಉದ್ಯೋಗ ದೊರೆಯಲಿದೆ ಎಂಬುವುದರ ಬಗ್ಗೆ ಹೆಚ್ಚಿನ ವಿವರ ನೀಡಬೇಕೆಂದು ಕೋರಿದರು.

   ಪರಿಸರ ಆಲಿಕೆ ಸಭೆಯ ಅಧ್ಯಕ್ಷತೆ ವಹಿಸಿದ್ದ, ಅಪರ ಜಿಲ್ಲಾಧಿಕಾರಿಗಳು, ಶ್ರೀ ಭಾಷಾರವರಿಗೆ ತಮ್ಮ ಅಹವಾಲುಗಳನ್ನು ಲಿಖಿತವಾಗಿ ಸಹ ನೀಡಬುಹುದೆಂದು ತಿಳಿಸಿದರು. ಮುಂದುವರೆದು, ಈ ಮೇಲಿನ ಮರಳು ಗಣಿಗಾರಿಕೆಯನ್ನು ರಾಜ್ಯ ಸರ್ಕಾರದ ಹೊಸ ಗಣಿಗಾರಿಕೆ ನೀತಿ ಪ್ರಕಾರ ಮಾಡಲಾಗುವುದು ಮತ್ತು ಈ ಗಣಿಗಾರಿಕೆಯನ್ನು ಮೆಃ ಹಟ್ಟಿ ಗಣಿ ಕಂಪನಿಯವರು ಸಂಪೂರ್ಣ ಪಾರದರ್ಶಕವಾಗಿ ಮಾಡುತ್ತಾರೆ ಎಂದು ತಿಳಿಸಿದರು ಹಾಗೂ ಸಭೆಯಲ್ಲಿ ಭಾಗವಹಿಸಿರುವ ನಾಗರೀಕರು ತಮ್ಮ ಅಹವಾಲುಗಳನ್ನು ಲಿಖಿತವಾಗಿ ಅಥವಾ ಖುದ್ದಾಗಿ ನೀಡಬಹುದು ಎಂದು ತಿಳಿಸಿದರು.

2. **ಶ್ರೀ ವಿಶ್ವನಾಥ್ ಸ್ವಾಮಿ, ಯಡಿವಾಳ ಗ್ರಾಮ :-**

   ಇವರು ಅಹವಾಲು ಮಂಡಿಸುತ್ತಾ, ಯಡಿವಾಳ ಗ್ರಾಮದವರಿಗೆ ಈ ಪರಿಸರ ಆಲಿಕೆ ಸಭೆಯ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ ಹಾಗೂ ಯಡಿವಾಳ ಗ್ರಾಮಕ್ಕೆ ಸರಿಯಾದ ರಸ್ತೆ ಇರದ ಕಾರಣ ಈ ಗಣಿಗಾರಿಗೆಯಲ್ಲಿ ಎಷ್ಟು ಜನಗಳು ಮತ್ತು ಟ್ರ್ಯಾಕ್ಟರ್ ಬಳಕೆಯಾಗುವ ಬಗ್ಗೆ ಮಾಹಿತಿ ಕೇಳಿದರು ಮತ್ತು ಯಾಂತ್ರಿಕವಲ್ಲದ ಗಣಿಗಾರಿಕೆ ಮಾಡಲು ಕೋರಿದರು.

   ಸಭೆಯ ಅಧ್ಯಕ್ಷತೆ ವಹಿಸಿದ್ದ, ಅಪರ ಜಿಲ್ಲಾಧಿಕಾರಿಗಳು ಸ್ಪಷ್ಟನೆ ನೀಡಿ, ಪರಿಸರ ಆಲಿಕೆ ಸಭೆಗೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು ಎಂದು ತಿಳಿಸಿದರು. ಮುಂದುವರೆದು, ಈ ಸಭೆಯ ನಡವಳಿಗಳನ್ನು ವೀಡಿಯೋಗ್ರಾಫಿ ಮಾಡಿ ಸಂಬಂಧಿಸಿದವರಿಗೆ ಕಳುಹಿಸಲಾಗುವ್ಯದು ಹಾಗೂ ಈ ಗಣಿಗಾರಿಕೆಯನ್ನು ಮೆಃ ಹಟ್ಟಿ ಗೋಲ್ಡ್ ಕಂಪನಿಯವರು, ಅನುಮೋದಿತ ಮೈನಿಂಗ್ ಪ್ಲಾನ್ ಪ್ರಕಾರ

ಸುಸಜ್ಜಿತವಾಗಿ ವಾಯು ಮತ್ತು ಶಬ್ದ ಮಾಲಿನ್ಯವನ್ನು ನಿಯಂತ್ರಣದಲ್ಲಿಟ್ಟು ಮಾಡುವರು ಎಂದು ತಿಳಿಸಿದರು.

ಶ್ರೀ. ರಾಘವ, ಮ್ಯಾನೇಜರ್, ಮೆ॥ ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿಯವರು, ಸ್ಪಷ್ಟನೆ ನೀಡಿ, ಮರಳು ಗಣಿಗಾರಿಕೆಯನ್ನು ಹೊಸ ಮರಳು ನೀತಿ ಪ್ರಕಾರ ಮಾಡಲಾಗುವುದು ಮತ್ತು ಸಿ.ಸಿ. ಕ್ಯಾಮೆರಾ, ಜಿ.ಪಿ.ಎಸ್ ಅಳವಡಿಸಿ ಪಾರದರ್ಶಕವಾಗಿ ಮಾಡುವುದರಿಂದ, ಯಾರು ಆತಂಕ ಪಡಬಾರದು ಎಂದು ತಿಳಿಸಿದರು.

3. **ಶ್ರೀ ನರಸಪ್ಪ, ಸರ್ಕಾರಿ ಪ್ರೌಢ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಸದಸ್ಯರು, ಚಿಕಲಪರ್ವಿ ಗ್ರಾಮ :**

ಇವರು ತಮ್ಮ ಅಹವಾಲು ಮಂಡಿಸುತ್ತಾ, ಚಿಕಲಪರ್ವಿ ಶಾಲೆಗೆ ಗಣಿಗಾರಿಕೆ ಕಂಪನಿಯಿಂದ ಕೊಠಡಿಗಳನ್ನು ಕಟ್ಟಿಸಲು ಹಾಗೂ ಶಿಕ್ಷಕರನ್ನು ಒದಗಿಸಲು ಸಹಾಯ ಮಾಡಬೇಕೆಂದು ಕೋರಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸ್ಪಷ್ಟನೆ ನೀಡಿ, ಇದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವುದಾಗಿ ತಿಳಿಸಿದರು ಹಾಗೂ ಗ್ರಾಮಸ್ಥರಿಗೆ ಯಡಿವಾಳ ಮತ್ತು ಮದ್ಲಾಪುರ ಮರಳು ಗಣಿಗಾರಿಯಿಂದ ಸ್ಥಳೀಯ ಪರಿಸರಕ್ಕೆ ಭಾದಿತವಾಗುವ ವಿಷಯಗಳ ಬಗ್ಗೆ ಅಹವಾಲು ಮಂಡಿಸಲು ತಿಳಿಸಿದರು.

4. **ಶ್ರೀ. ಖಾಸಿಂಸಾಬ್, ಗ್ರಾಮ ಪಂಚಾಯಿತಿ ಸದಸ್ಯರು, ಚಿಕಲಪರ್ವಿ ಗ್ರಾಮ:-**

ಇವರು ತಮ್ಮ ಅಹವಾಲು ಮಂಡಿಸುತ್ತಾ, ಈ ಗಣಿಗಾರಿಕೆಯಿಂದ ಬರುವ ಮರಳನ್ನು ಸ್ಥಳೀಯ ಯಡಿವಾಳ ಮತ್ತು ಮದ್ಲಾಪುರ ಗ್ರಾಮಸ್ಥರಿಗೆ ಆದ್ಯತೆ ಮೇರೆಗೆ ವ್ಯವಸ್ಥಿತವಾಗಿ ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು.

5. **ಶ್ರೀ ಕೃಷ್ಣದಾಸ್, ಚಿಕಲಪರ್ವಿ ಗ್ರಾಮ :**

ಇವರು ತಮ್ಮ ಅಹವಾಲು ಮಂಡಿಸುತ್ತಾ, ನದಿ ಪಾತ್ರದಲ್ಲಿ ಸುಮಾರು ಐದು ಅಡಿಯಷ್ಟು ಮಾತ್ರ ಮರಳು ದೊರೆಯುತ್ತದೆ ಮತ್ತು ಹೆಚ್ಚಿನ ಆಳದಲ್ಲಿ ಮಣ್ಣು, ಕೆಸರು ಇರುವುದರಿಂದ ನದಿಯ ನೀರು ಮಲಿನವಾಗಬಹುದೆಂಬ ಆತಂಕ ವ್ಯಕ್ತ ಪಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ, ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸ್ಪಷ್ಟನೆ ನೀಡಿ, ಗಣಿಗಾರಿಕೆ ಕ್ರಿಯಾ ಯೋಜನೆ (Mining Action Plan) ಪ್ರಕಾರ, ಎಷ್ಟು ಆಳದಲ್ಲಿ ಗಣಿಗಾರಿಕೆ ಮಾಡಬೇಕೆಂಬ ಪ್ರಕಾರ ಮಾಡಲಾಗುವುದು ಎಂದು ತಿಳಿಸಿದರು.

6. **ಶ್ರೀ. ನಾಗರಾಜ್, ಚಿಕಲಪರ್ವಿ ಗ್ರಾಮ:-**

ಚಿಕಲಪರ್ವಿ ಗ್ರಾಮದಲ್ಲಿ ಶಾಲೆ ಇದ್ದು, ಗಣಿಗಾರಿಕೆ ಲಾರಿಗಳು ಮತ್ತು ಇತರೇ ವಾಹನಗಳ ಓಡಾಟವನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೆಳಿಗ್ಗೆ 8 ರಿಂದ 10 ಘಂಟೆ ಹಾಗೂ ಮಧ್ಯಾಹ್ನ 3.30 ಘಂಟೆಯಿಂದ 5.00 ಘಂಟೆಯವರೆಗೆ ನಿರ್ಬಂಧಿಸಬೇಕೆಂದು ಅಭಿಪ್ರಾಯ ತಿಳಿಸಿದರು.

7. **ಶ್ರೀ. ಇಲಿಯಾಸ್, ಚಿಕಲಪರ್ವಿ ಗ್ರಾಮ:-**

ಇವರು ಯಾವುದೇ ಕಾರಣಕ್ಕೂ ಯಾಂತ್ರಿಕ ಗಣಿಗಾರಿಕೆ ನಡಸಬಾರದೆಂದು ಕೋರಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸ್ಪಷ್ಟನೆ ನೀಡುತ್ತಾ, ಮೇಲಿನ ಗ್ರಾಮದಲ್ಲಿ ಗಣಿಗಾರಿಕೆಯನ್ನು ಮೆಃ ಹಟ್ಟಿ ಗೋಲ್ಡ್ ಕಂಪನಿಯವರು ಸರ್ಕಾರದ ಹೊಸ ಮರಳು ನೀತಿ ಪ್ರಕಾರ ಪಾರದರ್ಶಕವಾಗಿ, ಸ್ಥಳೀಯ ಗ್ರಾಮಸ್ಥರ ಅಗತ್ಯತೆಯನ್ನು ಪೂರೈಸಿ, ಮರಳನ್ನು ಅಗತ್ಯವಿರುವವರ ಮನೆಗೆ ಗೃಹ ಬಳಕೆ ಎಲ್.ಪಿ.ಜಿ ಸಿಲೆಂಡರ್ ಪೂರೈಕೆ ವಿಧಾನದ ಪ್ರಕಾರ ಅಂದರೆ ಎಸ್.ಎಮ್.ಎಸ್. ಮೂಲಕ ಪೂರೈಸಲಾಗುವುದು ಎಂದು ತಿಳಿಸಿದರು.

ಶ್ರೀ. ರಾಘವ, ಮ್ಯಾನೇಜರ್, ಮೆಃ ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿಯವರು, ಸ್ಪಷ್ಟನೆ ನೀಡುತ್ತಾ, ಮೆಃ ಹಟ್ಟಿ ಗೋಲ್ಡ್ ಕಂಪನಿ, ಒಂದು ಸರ್ಕಾರಿ ಸಂಸ್ಥೆಯಾಗುದ್ದು, ಮರಳು ಗಣಿಗಾರಿಕೆಯನ್ನು ನಿಯಮದ ಪ್ರಕಾರ ಮಾಡಿ, ಸ್ಟಾಕ್‌ಯಾರ್ಡ್‌ನಲ್ಲಿ ಶೇಖರಿಸಲಾಗುವುದು ಮತ್ತು ಮರಳು ಅಗತ್ಯವಿರುವ ಗ್ರಾಮಸ್ಥರು ತಮ್ಮ ಅಗತ್ಯತೆಯನ್ನು ಗ್ರಾಮ ಪಂಚಾಯಿತಿ ಅಥವಾ ಕಂಪನಿ ಪ್ರತಿನಿಧಿಗೆ ಎಸ್.ಎಮ್.ಎಸ್. ಮೂಲಕ ತಿಳಿಸಿ, ತಮ್ಮ ವಾಹನದಲ್ಲೆ ಮರಳನ್ನು ಸ್ಟಾಕ್‌ಯಾರ್ಡ್‌ನಿಂದ ಸಾಗಿಸಬಹುದೆಂದು ತಿಳಿಸಿದರು ಮತ್ತು ಈ ವ್ಯವಸ್ಥೆಯಿಂದ ಚಿಕಲಪರ್ವಿ ಗ್ರಾಮದಲ್ಲಿ ವಾಹನ ಓಡಾಟದ ತೊಂದರೆ ಇರುವುದಿಲ್ಲವೆಂದು ಸ್ಪಷ್ಟಪಡಿಸಿದರು

8. **ಶ್ರೀ. ಮುತ್ತಣ್ಣ, ಗ್ರಾಮ ಪಂಚಾಯಿತಿ ಸದಸ್ಯರು, ಯಡಿವಾಳ ಗ್ರಾಮ:-**

ಇವರು ಮರಳು ಗಣಿಗಾರಿಕೆಯಿಂ ನದಿಯಿಂದ ಹಾಕಿರುವ ಕುಡಿಯುವ ನೀರಿನ ಪೈಪ್‌ಲೈನ್‌ಗೆ ಯಾವುದೇ ತೊಂದರೆಯಾಗಬಾರದೆಂದು ಒತ್ತಾಯಿಸಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಹೊಸ ಮರಳು ನೀತಿ ಬಗ್ಗೆ ಬೆಳಕು ಚೆಲುತ್ತಾ, ಜಿಲ್ಲೆಯ ನದಿಪಾತ್ರದ ಮರಳು ಗಣಿಗಾರಿಕೆಯ ಹಕ್ಕನ್ನು ಸರ್ಕಾರಿ ಸಂಸ್ಥೆಯಾದ ಮೆಃ ಹಟ್ಟಿ ಗೋಲ್ಡ್ ಕಂಪನಿಯವರಿಗೆ ಸ್ಥಳೀಯ ಗ್ರಾಮಸ್ಥರ ಹಿತವನ್ನು ಗಮನದಲ್ಲಿಟ್ಟು ನೀಡಲಾಗಿದೆ ಎಂದು ತಿಳಿಸಿದರು ಹಾಗೂ ಹಳ್ಳ-ಕೊಳ್ಳದ ಮರಳು ನಿಯಂತ್ರಣವನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗಿದೆ ಎಂದು ತಿಳಿಸಿದರು. ಮುಂದುವರೆದು, ಮೆಃ ಹಟ್ಟಿ ಗೋಲ್ಡ್ ಕಂಪನಿಯವರು, ತಮ್ಮ ಸಿ.ಎಸ್.ಆರ್. ರಡಿ ತಮ್ಮ ಕಂಪನಿಯ ಶೇಕಡಾ ಐದರ ಲಾಭವನ್ನು ಸ್ಥಳೀಯ ಗ್ರಾಮಗಳ ಮೂಲ ಸೌಕರ್ಯ ಅಭಿವೃದ್ಧಿಗೆ ಬಳಸಲಿದ್ದಾರೆ ಎಂದು ಸ್ಪಷ್ಟನೆ ನೀಡಿದರು.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

ಮಾನ್ಯ ಜಿಲ್ಲಾಧಿಕಾರಿಗಳಿಂದ
ಟಿಪ್ಪಣಿ ಅನುಮೋದಿಸಲ್ಪಟ್ಟಿದೆ.

31.05.2022

ಅಪರ ಜಿಲ್ಲಾಧಿಕಾರಿಗಳು ಮತ್ತು
ಜಿಲ್ಲಾ ದಂಡಾಧಿಕಾರಿಗಳು ಮತ್ತು
ಪರಿಸರ ಸಾರ್ವಜನಿಕ ಆಲಿಕೆ ಸಭೆ
ಅಧ್ಯಕ್ಷರು, ರಾಯಚೂರು